# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಕ್ಷಿಣ ವಲಯ, ವಿಜಯನಗರ ಉಪವಿಭಾಗ

## ವಾರ್ಡ್ ನಂ. 122 : ಕೆ.ಪಿ ಅಗ್ರಹಾರ

**ದಿನಾಂಕ: 18.06.2022 ರಂದು 11.30 ಗಂಟೆಗೆ ಶ್ರೀ.ರವಿವರ್ಮ.ಬಿ ನೋಡಲ್ ಅಧಿಕಾರಿ, ವಾರ್ಡ್ ನಂ.122 ರವರ ಅಧ್ಯಕ್ಷತೆಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿಜಯನಗರ ಉಪವಿಭಾಗ ಕಛೇರಿಯಲ್ಲಿ ನಡೆದ ಸಭೆಯ ನಡಾವಳಿಗಳು:**

**ಸಭೆಯಲ್ಲಿ ಹಾಜರಿದ್ದವರು:**

| ಕ್ರಸಂ | ಹೆಸರು | ಪದನಾಮ |
|---|---|---|
| 1 | ಶ್ರೀ. ರವಿವರ್ಮ ಬಿ | ನೋಡಲ್ ಅಧಿಕಾರಿ-ವಾರ್ಡ್ ನಂ.122 |
| 2 | ಶ್ರೀ ಹೇಮಂತ್ ಕುಮಾರ್ ಎಸ್ ಕೆ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಹಾಗೂ ಸಂಚಾಲಕರು-ವಾರ್ಡ್ 122 |
| 3 | ಶ್ರೀ. ಡಿ ರಾಮ್ ಕುಮಾರ್ | ಕಿ.ಆ.ಪ |
| 4 | ಶ್ರೀಮತಿ. ಗುಣ.ಎಸ್ | LW (SWM) |
| 5 | ಶ್ರೀಮತಿ. ಮಹದೇವಮ್ಮ | LW (SWM) |
| 6 | ಶ್ರೀ.ವಸಂತ್ | ಸರ್ವಾಜನಿಕರು. |

**:ನಡಾವಳಿಯ ವರದಿ:**

➢ ಕಾರ್ಯದರ್ಶಿಗಳಾದ ಶ್ರೀ.ಎಸ್.ಕೆ.ಹೇಮಂತ್ ಕುಮಾರ್ ರವರು ಸಭೆಗೆ ಹಾಜರಾದ ನೋಡಲ್ ಅಧಿಕಾರಿ ಹಾಗೂ ಪಾಲಿಕೆಯ ಅಧಿಕಾರಿಗಳು/ನೌಕರರಿಗೆ ಸ್ವಾಗತ ಕೋರಿದರು.

- **ರಸ್ತೆಗುಂಡಿ ನಿರ್ವಹಣೆ ಬಗ್ಗೆ:-**
  - 26ನೇ ಕ್ರಾಸ್ ಟೆಂಟ್ ರಸ್ತೆಯಲ್ಲಿ Debris ನ್ನು ತೆರವುಗೊಳಿಸಲು ಶ್ರೀ.ಡಿ.ರಾಮ್.ಕುಮಾರ್ ಕಿರಿಯ ಆರೋಗ್ಯ ಪರಿವೀಕ್ಷಕರು ರವರು ಕೋರಿದರು, ಅದಕ್ಕೆ ಶ್ರೀ.ಎಸ್.ಕೆ.ಹೇಮಂತ್ ಕುಮಾರ್ ಸಹಾಯಕ ಅಭಿಯಂತರರು, ವಾರ್ಡ್ ನಂ.122 ರವರು Debris ನ್ನು ತೆರವುಗೊಳಿಸಿರುವುದಾಗಿ ಸಭೆಗೆ ತಿಳಿಸಿದರು.
  - 15ನೇ ಕ್ರಾಸ್ ಬಳಿ ಮಳೆನೀರು ತೂಂಬಿಕೊಂಡು ಹಾನಿಯಾಗಿದ್ದು, ಸದರಿ ರಸ್ತೆಗಳಲ್ಲಿ ಹೂಳು ತೆಗೆದು ಚರಂಡಿಗಳನ್ನು ಅಭಿವೃದ್ಧಿಗೊಳಿಸಲು ಸಭೆಯಲ್ಲಿ ತೀರ್ಮಾನಿಸಲಾಗಿದೆ.
  - 8ನೇ ಕ್ರಾಸ್ ಮಾಗಡಿ ರಸ್ತೆಯ ಬಳಿ ಮಳೆನೀರು ತುಂಬಿಕೊಂಡು ಹಾನಿಯಾಗಿದ್ದು, ಸದರಿ ರಸ್ತೆಗಳಲ್ಲಿ ಹೂಳು ತೆಗೆದು ಚರಂಡಿಗಳನ್ನು ಅಭಿವೃದ್ಧಿಗೊಳಿಸಲು ಸಭೆಯಲ್ಲಿ ತೀರ್ಮಾನಿಸಲಾಗಿದೆ.

- **ಕಾಮಗಾರಿಯ ಬಗ್ಗೆ:-**
  - ನೋಡಲ್ ಅಧಿಕಾರಿ ರವರು ಮತನಾಡಿ ವಾರ್ಡ್‌ಗಳಲ್ಲಿ Banner ಗಳನ್ನು ತೆರವುಗೊಳಿಸಲು ಸೂಚಿಸಿದರು.
  - ಕಸದ Point ಗಳಾದ ಈ ಕೆಳಕಂಡ ಸ್ಥಳಗಲ್ಲಿ C.C Camera ಗಳನ್ನು ಅಳವಡಿಸಲು ಶ್ರೀ.ಡಿ.ರಾಮ್.ಕುಮಾರ್ ಕಿರಿಯ ಆರೋಗ್ಯ ಪರಿವೀಕ್ಷಕರು ರವರು ಕೋರಿದರು.

- **ಸ್ವಚ್ಛತೆ ಮತ್ತು ಘನ ತ್ಯಾಜ್ಯ ನಿರ್ವಹಣೆ ಬಗ್ಗೆ:-**

- ನೋಡಲ್ ಅಧಿಕಾರಿರವರು ವಾರ್ಡ್ ನಂ. 122ರ ವ್ಯಾಪ್ತಿಯಲ್ಲಿರುವ ಬ್ಲಾಕ್, ಸ್ಪಾಟ್‌ಗಳ ಬಗ್ಗೆ ವಿಚಾರಿಸಲಾಗಿ, ಇದಕ್ಕೆ ಶ್ರೀ.ಡಿ.ರಾಮ್.ಕುಮಾರ್ ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.122 ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿ ಪ್ರತಿ ನಿತ್ಯವು ಬ್ಲಾಕ್‌ಸ್ಪಾಟ್‌ಗಳನ್ನು ತೆರವುಗೊಳಿಸುಲಾಗುತ್ತಿದೆಂದು ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆಯಲ್ಲಿ ಕಸ ಹಾಕುವವರಿಗೆ, ಮಾರ್ಷಲ್‌ಗಳು ದಂಢ ವಿದಿಸಿರುವುದಾಗಿ ಸಭೆಗೆ ತಿಳಿಸಿದರು.
- ಪೌರಕಾರ್ಮಿಕರು ಪ್ರತಿನಿತ್ಯ ಕಾರ್ಯನಿರ್ವಹಿಸುತ್ತಿರುವುದಾಗಿ ಕಿರಿಯ ಆರೋಗ್ಯ ಪರಿವೀಕ್ಷಕರು ತಿಳಿಸಿದರು.

➢ ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿರವರು ಸಭೆಗೆ ಹಾಜರಾದ ಎಲ್ಲಾ ಅಧಿಕಾರಿ/ನೌಕರರಿಗೆ ವಂದನೆಯನ್ನು ತಿಳಿಸುತ್ತಾ ಇನ್ನು ಮುಂದೆಯೂ ಈ ಸಭೆಗಳಲ್ಲಿ ಪೂರ್ವತಯಾರಿಯೊಂದಿಗೆ ಪಾಲ್ಗೊಂಡು ವಾರ್ಡಿನ ಕುಂದುಕೊರತೆಗಳತ್ತ ಗಮನಹರಿಸಿ ವಾರ್ಡ್ ಅಭಿವೃದ್ಧಿ ಪಡಿಸಲು ಸಹಕಾರ ನೀಡಬೇಕೆಂದು ಮನವಿ ಮಾಡಿದರು.

➢ ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರಾದ ಶ್ರೀ.ಎಸ್.ಕೆ.ಹೇಮಂತ್ ಕುಮಾರ್ ರವರು ಸಭೆಗೆ ಹಾಜರಾದ ಎಲ್ಲಾ ಅಧಿಕಾರಿಗಳು/ನೌಕರರಿಗೂ ವಂದನೆಯನ್ನು ತಿಳಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

18/06/2022 | 18/06/2022

ಸದಸ್ಯ ಕಾರ್ಯದರ್ಶಿ-ವಾರ್ಡ್ 122 ಹಾಗೂ
**ಸಹಾಯಕ ಅಭಿಯಂತರರು,**

(ರವಿವರ್ಮ.ಬಿ)
**ನೋಡಲ್ ಅಧಿಕಾರಿ ವಾರ್ಡ್-122**

<u>ಪ್ರತಿಯನ್ನು:</u>

1) ಜಂಟಿ ಆಯುಕ್ತರು, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
2) ಕಾರ್ಯಪಾಲಕ ಅಭಿಯಂತರರು (ವಿಜಯನಗರ ವಿಭಾಗ) ರವರ ಮಾಹಿತಿಗಾಗಿ ಕಳುಹಿಸಿದೆ.
3) ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿಜಯನಗರ) ರವರ ಮಾಹಿತಿಗಾಗಿ ಕಳುಹಿಸಿದೆ.
4) ಸಹಾಯಕ ಕಂದಾಯ ಅಧಿಕಾರಿ (ವಿಜಯನಗರ) ರವರ ಮಾಹಿತಿಗಾಗಿ ಕಳುಹಿಸಿದೆ.
5) ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.122 ರವರ ಮಾಹಿತಿಗಾಗಿ.
6) ಸಹಾಯಕ ಅಭಿಯಂತರರು (ವಿದ್ಯುತ್ ಬೆಸ್ಕಾಂ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
7) ಸಹಾಯಕ ಅಭಿಯಂತರರು ವಿದ್ಯುತ್ (ಬೀದಿ ದೀಪ) ಬಿಬಿಎಂಪಿ ರವರ ಮಾಹಿತಿಗಾಗಿ ಸೂಕ್ತ ಕ್ರಮಕ್ಕಾಗಿ.
8) ಕಛೇರಿ ಕಡತಕ್ಕೆ.